

# ವಾಹ್ ರೊಟೊರುವಾ! ಬಿಸಿ ನೀರಿನ ಬುಗ್ಗೆಗಳ ಆಗರ

■ ಡಾ. ಶೇಖರ್ ಗೌಳೇರ್

ಮೂರು ದಶಕಗಳ ಕಾಲ ಕಾಲೇಜು ವಿದ್ಯಾರ್ಥಿಗಳಿಗೆ ಜ್ವಾಲಾಮುಖಿಗಳ ಪಾಠ ಹೇಳಿದ್ದರೂ ಅವುಗಳ ಪ್ರತ್ಯಕ್ಷ ದರ್ಶನವಾಗಿರಲಿಲ್ಲ. ಭಾರತದ ಏಕೈಕ ಜಾಗೃತ ಜ್ವಾಲಾಮುಖಿ 'ಬ್ಯಾರನ್ ಐಲಂಡ್' ನೋಡಲು ನಿಕೋಬಾರ್ ದ್ವೀಪಕ್ಕೆ ಹೋದರೂ ಅನುಮತಿ ಸಿಗದೇ ಅಂಡಮಾನಿನ ಜೆಟ್ಟಿ ದ್ವೀಪದ ಬಾರಾಟಾಂಗ್ ಕೆಸರುಮುಖಿ ಜ್ವಾಲಾಮುಖಿ (**Mud Volcanoe**) ನೋಡಿ ತೃಪ್ತಿಪಟ್ಟುಕೊಂಡಿದ್ದೆ. ಕಳೆದ ವರ್ಷ ನ್ಯೂಜಿಲೆಂಡ್‌ನ ರೊಟೊರುವಾ ತಲುಪಿದಾಗ ಅಲ್ಲಿಯ ಜ್ವಾಲಾಮುಖಿಗಳು ಅಚ್ಚರಿಮೂಡಿಸಿದ್ದವು. ಜಗತ್ತಿನಲ್ಲಿ ಅಮೆರಿಕದ ರಾಷ್ಟ್ರೀಯ ಹಳದಿ ಉದ್ಯಾನವನ ಹಾಗೂ ಐಲಂಡ್‌ಗಳನ್ನು ಬಿಟ್ಟರೆ ಅಸಂಖ್ಯಾತ ಜ್ವಾಲಾಮುಖಿಗಳಿರುವುದು ರೊಟೊರುವಾದಲ್ಲಿ ಮಾತ್ರ.

ಹೌದು, ಜನ ಹೇಳುವಂತೆ ರೊಟೊರುವಾ ಥರ್ಮಲ್ ಸಿಟಿ, ಸಲ್ಫರ್ ಸಿಟಿ ಹಾಗೂ ಕ್ರೇಟರ್ ಲೇಕ್‌ಸಿಟಿ. ಮಾವ್ೋರಿ ಭಾಷೆಯಲ್ಲಿ 'ರೋಟೊ' ಎಂದರೆ ಎರಡು, 'ರುವಾ' ಎಂದರೆ ಸರೋವರ.